# ನಿರಂಜನರ ಬರವಣಿಗೆಯಲ್ಲಿ ಮಾರ್ಕ್ಸ್‌ವಾದ


**ರಮೇಶ್**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ ವಿಶ್ವೇಶ್ವರಪುರ ಕಲೆ ಮತ್ತು ವಾಣಿಜ್ಯ ಕಾಲೇಜು, ಕೆ.ಆರ್. ರಸ್ತೆ, ಬೆಂಗಳೂರು.


**DOI: https://doi.org/10.5281/zenodo.15124060**

## ABSTRACT:


ನಿರಂಜನರು ಸಾಹಿತ್ಯವಲಯದಲ್ಲಿ ಉಂಟುಮಾಡಿದ ಸಾಮಾಜಿಕ ಹೋರಾಟ ಬಹಳ ಮುಖ್ಯವಾದುದು. ಸಾಹಿತ್ಯ ಮತ್ತು ಬದುಕನ್ನು ಏಕ ರೀತಿಯಲ್ಲಿ ಕಂಡುಕೊಂಡವರು. ಸಾಮಾಜಿಕ ಬದ್ಧತೆಯನ್ನು ಕೊನೆಯವರೆಗೂ ಉಳಿಸಿಕೊಂಡವರು. ಬಾಲ್ಯದಲ್ಲಿ ಗಾಂಧಿವಾದಕ್ಕೆ ಮನಸೋತು, ಅನಂತರ ಸಮಾಜವಾದದತ್ತ ಒಲವು ಬೆಳಸಿಕೊಂಡರು. ಹರೆಯದಲ್ಲಿ ಸಮತಾವಾದದ ಸಿದ್ಧಾಂತಗಳಿಂದ ಪ್ರಭಾವಿತರಾಗಿ ಮಾರ್ಕ್ಸ್‌ವಾದಿಯಾಗಿ ಕಮ್ಯೂನಿಸ್ಟ್ ಪಕ್ಷದ ಸಕ್ರಿಯ ಸದಸ್ಯರಾಗಿ ದುಡಿದವರು ನಿರಂಜನರು. 'ಸ್ವಾತಂತ್ರ್ಯ ಚಳವಳಿ, ಏಕೀಕರಣ ಚಳವಳಿ, ಹಿಂದೂ ಸಾಂಸ್ಕೃತಿಕ ಪುನರುಜ್ಜೀವನ ಚಳವಳಿಗಳು ಸೊಕ್ಕೇರಿ ಒಟ್ಟಿಗೆ ಕ್ರಿಯಾನಿರತವಾಗಿದ್ದಾಗ, ಮಾರ್ಕ್ಸ್‌ವಾದದಿಂದ ಆಕರ್ಷಿತವಾಗಿ, ಅಖಿಲಭಾರತ ಚಳವಳಿಯ ಒಂದು ಭಾಗವಾಗಿ ಕನ್ನಡ ಪ್ರಗತಿಶೀಲ ಚಳವಳಿಯು ಹುಟ್ಟಿಕೊಂಡಿತು.

ಶಿವರಾಯರು ಬೆಳೆಬೆಳೆಯುತ್ತಾ ಗಾಂಧೀ ಪ್ರಭಾವ ಹೆಚ್ಚಾಗ ತೊಡಗಿತ್ತು ಸಾಮ್ರಾಜ್ಯಶಾಹಿಯನ್ನು ಖಂಡಿಸುತ್ತಿದ್ದು ಹರಿಜನ ಕೇರಿಗಳಲ್ಲಿ ನೈರ್ಮಲ್ಯದ ಕೆಲಸವನ್ನು ಕೈಗೊಂಡದ್ದು ಎಲ್ಲೆಡೆ ಧೈರ್ಯದಿಂದ ಬಂಡವಾಳಶಾಹಿ ವಿರುದ್ಧ ಕಿಡಿಕಾರುತ್ತ ಮುನ್ನೆಡೆಯುತ್ತಿದ್ದು ನೀಲೇಶ್ವರ ಮೊದಲ ಬಾರಿಗೆ ಕೇಳಿದ 'ಇಂಕ್ವಿಲಾಬ್ ಜಿಂದಾಬಾದ್' ಕಾರ್ಮಿಕ ವಿದ್ಯಾರ್ಥಿಗಳನ್ನು ಸಂಘಟಿಸುವ ರೀತಿ ಹೊಸದಾಗಿ ಕಂಡದ್ದು ಗಾಂಧೀವಾದದ ಬಗೆಗಿನ ಮೋಹಕ ಕೊನೆಗೊಂಡು ಬ್ರಿಟಿಷರಿಂದ ಮುಕ್ತಿ ಹೊಂದಿದ ಭಾರತ ದೇಶದಲ್ಲಿ ಹೊಸ ವ್ಯವಸ್ಥೆಯ ನಿರ್ಮಾಣಕ್ಕೆ ಹಾತೊರೆದು ಮಾರ್ಕ್ಸ್‌ವಾದವನ್ನು ಅವಲಂಭಿಸಿದರು. ಮಾರ್ಕ್ಸ್‌ವಾದ ಎಂದರೆ ಮಾನವೀಯತೆ ಶೋಷಣೆ ವಿರುದ್ಧ ಬಂಡೆದ್ದ ನ್ಯಾಯವಾದ ಒಂದು ಪಥ ದುಡಿಯುವ ಕೆಲಸಕ್ಕೆ ಸೂಕ್ತವಾದ ಕೂಲಿ ಕೇಳುವ ಹಕ್ಕು, ಬಸವಣನ ಸಮಾನತಾ ಧರ್ಮ ಸಕಲ ಜೀವಿಗಳಿಗೆ ಲೇಸನೇ ಬಯಸುವ ಮನುಷ್ಯತ್ವ ಎಲ್ಲವನ್ನು ಮಾರ್ಕ್ಸ್‌ವಾದ ಒಳಗೊಂಡಿದೆ. ನಮ್ಮ ಸುತ್ತ ಪ್ರಪಂಚವನ್ನು ಜಾಗೃಕತೆಯಿಂದ ಪರಿಶೀಲಿಸಿದರೆ ಅದರಲ್ಲಿ ಅಡಕವಾಗಿರುವ ಎಲ್ಲಾ ವಸ್ತುಗಳು ಅದರಲ್ಲಿ ಸಂಭವಿಸುವ ಎಲ್ಲ ಇಂದ್ರೀಯ ಗೋಚರ ಘಟನೆಗಳೂ ಭೌತಿಕವಾದವು ಅಥವಾ ಮಾನಸಿಕವಾದವು ಎಂದು ತಿಳಿದುಬರುತ್ತದೆ. ಮಾರ್ಕ್ಸ್‌ವಾದವು ಅರಿವಿನ ವಿಧಾನವನ್ನು ಪ್ರಭಾವಿಸುವ ನಿಯಮವನ್ನು ಸಹ ಪರಿಶೀಲಿಸುತ್ತದೆ. ಸಾಮಾಜಿಕ ಜೀವನದಲ್ಲಿ ಪ್ರಗತಿಪರ ಮತ್ತು ಪ್ರತಿಗಾಮಿ ಶಕ್ತಿಗಳ ಒಂದನ್ನೊಂದು ಸಂಘರ್ಷಿಸುತ್ತಲೇ ಇರುತ್ತವೆ. ಮಾರ್ಕ್ಸ್‌ವಾದ ಎಲ್ಲ ರೀತಿಯ ಸಮಾಜಗಳ ಮೂಲಾಧಾರವಾದ ಅಂದರೆ ಜನರು ತಮ್ಮ ಜೀವನ

ಸಾಗಿಸಲು ಕೈಗೊಳ್ಳಬೇಕಾದ ಚಟುವಟಿಕೆಗಳನ್ನು ಪರಿಶೀಲಿಸಿ ಅದರ ಮೂಲಕ ಮಾನವ ಉತ್ಪಾದನಾ ವಿಧಿಯಲ್ಲಿ ಇತರರೊಡನೆ ಯಾವ ರೀತಿಯ ಸಂಬಂಧ ಹೊಂದಿರುತ್ತಾನೆ ಎಂಬುದನ್ನು ಪರಿಶೀಲಿಸುತ್ತದೆ.

**KEYWORDS:**

ಸಮತಾವಾದ, ಶಿವರಾಯ ಮೌಲ್ಯಗಳು, ನಿರಂಜನರ ಬಾಲ್ಯ, ಮಾರ್ಕ್ಸ್‌ವಾದ, ಜಮೀನ್ದಾರ, ಪ್ರಗತಿಪರ ಚಳವಳಿ.

ಮಾರ್ಕ್ಸ್, ಲೆನಿನ್, ಗಾರ್ಕಿ, ಟಾಲ್‌ಸ್ಟಾಯ್, ದಾಸ್ತೋವಸ್ಕಿ ಅವರ ಬರಹಗಳನ್ನು ನಿರಂಜನರು ಓದಿಕೊಂಡಿದ್ದರು. 1942ರಲ್ಲಿ ರಾಷ್ಟ್ರಬಂಧು ಪತ್ರಿಕೆಯ ಉಪಸಂಪಾದಕರಾದರು ನಂತರ ಸಂಪಾದಕ ಮಂಡಳಿಯಲ್ಲಿ ಸೇರಿದ್ದಾಯಿತು. ಪತ್ರಿಕೋದ್ಯಮಿಗಳ ಸಮ್ಮೇಳನವೊಂದು 1943ರಲ್ಲಿ ನಡೆಯಿತು. ಇದರಲ್ಲಿ ಸಮ್ಮೇಳನದ ಸಂಘಟನೆಯ ಕಾರ್ಯದರ್ಶಿಯಾಗಿ ಪ್ರಥಮಬಾರಿಗೆ ಉತ್ತರ ಕರ್ನಾಟಕದಲ್ಲಿ ಸಂಚಾರ ಮಾಡಿ ಸಮ್ಮೇಳನದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಈ ಸಮ್ಮೇಳನದ ಗೌರವ ಕಾರ್ಯದರ್ಶಿ ಕೈಯ್ಯಾರ ಕಿಞ್ಞಣ್ಣರೈ ಆಗಿದ್ದರು. ಅದರ ಜತೆಗೆ ಸಮತಾವಾದಿ ಸಂಘಟನೆಗಳನ್ನು ಇನ್ನೂ ಅನೇಕ ಸಂಘಸಂಸ್ಥೆಗಳೊಡನೆ ಒಲವಿಟ್ಟು ದುಡಿದರು. ಅವರ ಕಾರ್ಯವ್ಯಾಪ್ತಿ ಬೆಳೆದಂತೆ ಮಂಗಳೂರಿನಿಂದ ಬೆಂಗಳೂರಿಗೆ ಪ್ರಯಾಣ ಮಾಡಿದರು. ಗುಲಾಮಗಿರಿಯ ವಿರುದ್ಧ ಅನೇಕ ಸಂಘಟನೆಗಳಲ್ಲಿ ಮತ್ತು ಕಾರ್ಮಿಕ ಸಂಘಟನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಒಂದು ಖಾದಿಯ ಮುಂಡನ್ನು ಉಟ್ಟು ಅರ್ಧ ತೋಳಿನ ಚಿಕ್ಕ ಅಂಗಿಯನ್ನು ಹಾಕಿ ಖಾದಿಟೋಪಿಯನ್ನು ತೊಡುತ್ತಿದ್ದರು. ದೇಶಕ್ಕೆ ಇನ್ನೂ ಸ್ವಾತಂತ್ರ್ಯ ಬಂದಿರಲಿಲ್ಲ ದೇಶಪ್ರೇಮ ಸಾಹಿತ್ಯ ಪ್ರೇಮದ ಜತೆಗೆ ಕಮ್ಯೂನಿಸ್ಟ್ ಪ್ರಭಾವ ಅವರ ಮೇಲೆ ಗಾಢವಾಯಿತು ಭಾರತ ಬಿಟ್ಟು ತೊಲಗಿ ಚಳವಳಿಯ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜನತೆಗೆ ಪ್ರಥಮ ಬಾರಿಗೆ ಪ್ರಗತಿಶೀಲ ಸಾಹಿತ್ಯದ ಪರಿಚಯವನ್ನು ಮಾಡಿಕೊಟ್ಟರು ರಾಷ್ಟ್ರಬಂಧು ಪತ್ರಿಕೆಯ ಜತೆಗೆ ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಬೆಂಗಳೂರಿನ ತಾಯಿನಾಡು ಡೈಲಿನ್ಯೂಸ ಜನವಾಣಿ ದೈನಿಕಗಳು ಮಂಗಳೂರಿನ ಸುದ್ಧಿಗಾರ ಅಲ್ಲದೆ ರಾಷ್ಟ್ರಬಂಧು ಸಾಪ್ತಾಹಿಕ ನವಭಾರತ ದೈನಿಕಗಳಲ್ಲಿ ನಗರ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಿದರು. 1944ರಲ್ಲಿ ಬೆಂಗಳೂರಿನ ಉಷಾ ಮಾಸಿಕದಲ್ಲಿ ಇವರ ಕಥೆ ಪ್ರಕಟಣೆಯಾಯಿತು. ಇದೆಲ್ಲದರ ಜತೆಗೆ ಪ್ರಕಾಶ ಅಸೋಸಿಯೇಷನ್ ಚಲನಚಿತ್ರ ವಿಮರ್ಶಕರ ಸಂಘ ಪ್ರಗತಿಶೀಲ ಲೇಖಕರ ಸಂಘ ಇಂಡೋ ಸೋವಿಯತ್ ಮೈತ್ರಿಕೂಟ ಮೊದಲಾದವುಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. 1943ರಲ್ಲಿ ಕಮ್ಯೂನಿಸ್ಟ್ ಪಕ್ಷದ ಸದಸ್ಯರಾದರು ಜೂನ್‌ನಲ್ಲಿ ಮುಂಬಯಿಯಲ್ಲಿ ಜರುಗಿದ ಅಖಿಲ ಭಾರತ ಪ್ರಗತಿಶೀಲ ಲೇಖಕರ

ಸಮ್ಮೇಳನ ಹಾಗೂ ಜನತಾ ರಂಗಭೂಮಿ ಸಮ್ಮೇಳನಗಳಲ್ಲಿ ಭಾಗಿಯಾಗಿದ್ದರು. 1945ರಲ್ಲಿ ಬೆಂಗಳೂರಿನಲ್ಲಿ ಅ. ನ. ಕೃ ಅವರನ್ನು ಭೇಟಿ ಮಾಡಿದರು. 1944ರ ನ°ಂಬರ್ 7 ರಂದು ಮಂಗಳೂರು ಮೈದಾನದಲ್ಲಿ ನಾವೂ ಮನುಷ್ಯರು ಎಂಬ ಬಯಲು ನಾಟಕದ ಪ್ರದಶನ ನಡೆಯಿತು. ಇದು ಜನತಾರಂಗ ಭೂಮಿಯ ಕೊಡುಗೆ ಇದರ ಕಾರ್ಯದರ್ಶಿಯಾಗಿ ನಿರಂಜನರು ಕೆಲಸ ನಿರ್ವಹಿಸುತ್ತಿದ್ದರು. ಧಾರವಾಡದಲ್ಲಿ ಶ್ರೀರಂಗ ಗೋಕಾಕ್ ಅ. ನ. ಕೃ ಭಾಗವಹಿಸಿದ್ದ ಪ್ರಗತಶೀಲ ಸಾಹಿತಿಗಳು ಸಾಹಿತ್ಯ ಸಮಾವೇಶಗೊಂಡು 28ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದರು. 1945ರಲ್ಲಿ ಬೆಂಗಳೂರಿನಿಂದ ಹುಬ್ಬಳ್ಳಿಗೆ ಕಮ್ಯೂನಿಸ್ಟ್ ಪಕ್ಷದ ಕನ್ನಡ ವಾರಪತ್ರಿಕೆ ಜನಶಕ್ತಿ ಪ್ರಕಟಣೆಯ ಯೋಜನೆ ವಿಳಂಬವಾದುದರಿಂದ ಜನತಾ ಸಾಹಿತ್ಯ ಲಾಂಛನದಲ್ಲಿ ಪುಸ್ತಕ ಪ್ರಕಟಣೆಯನ್ನು ಆರಂಭಮಾಡಿದರು.

1948-49 ಮತ್ತು 1950ರಲ್ಲಿ ಸರ್ಕಾರ ಕಮ್ಯೂನಿಸ್ಟ್ ಪಕ್ಷವನ್ನು ನಿಷೇದಿಸಿದಾಗ ಶಿವರಾಯ ಭೂಗತ ಬದುಕನ್ನು ನಡೆಸಬೇಕಾಯಿತು. ಆಗ ಶಿವರಾಯ ತಮ್ಮ ಹೆಸರನ್ನು 'ವೆಂಕಟ್' ಎಂದು ಬದಲಿಸಿಕೊಂಡು ಬರವಣಿಗೆಗೆ ತೊಡಗಿದರು. ತಾವು ನಡೆಸುತ್ತಿರುವ ಕಾರ್ಯಚಟುವಟಿಕೆ ಸರಕಾರಕ್ಕೆ ತಿಳಿಯಬಾರದೆಂದು 'ಜನಶಕ್ತಿಯ' ಮೇಲೆ ಸರಕಾರ ನಿಷೇಧಾಜ್ಞೆ ಜಾರಿಗೊಳಿಸುವವರೆಗೂ ಹುಬ್ಬಳ್ಳಿ, ಧಾರವಾಡಗಳಲ್ಲಿ ಸರಕಾರದ ಹಿಡಿತಕ್ಕೆ ತಲೆಮರೆಸಿಕೊಂಡು ಪತ್ರಿಕೆ ವಿಷಯ ಪೂರೈಕೆ ಮಾಡುತ್ತಲೇ ಇದ್ದರು. ನಂತರ ಬೆಂಗಳೂರಿನಲ್ಲಿ ಭೂಗತನಾಗಿದ್ದುಕೊಂಡೇ ಸರಿ, ತಪ್ಪುಗಳ ಸೈದ್ಧಾಂತಿಕ ತಾಕಲಾಟದಲ್ಲಿ ತೊಳಲಾಡಿ, ಬೆಂದು ಪಕ್ಷದಿಂದ ಹೊರಬಂದು ಅದಕ್ಕೆ ಸಂಬಂಧಪಟ್ಟವರಿಗೆ ಪತ್ರ ಬರೆದು ತಿಳಿಸಿದರು. ಕಮ್ಯೂನಿಸ್ಟ್ ಚಟುವಟಿಕೆಯಲ್ಲಿ ಭೂಗತ ಬದುಕು ಸೇರಿದಂತೆ ಹತ್ತು ವರ್ಷಗಳು ಸಕ್ರಿಯವಾಗಿ ಭಾಗವಹಿಸಿ ಕಡೆಗೆ ಕಮ್ಯೂನಿಸ್ಟ್ ಪಕ್ಷ ತನ್ನ

ನಿಲುವನ್ನು ಸರಕಾದೊಡನೆ ಹೊಸ ಆಟ ಆಡಲು ಯೋಚಿಸಿದಾಗ ಅದರಿಂದ ಬೇಸತ್ತು ಪಕ್ಷದಿಂದ ಬಿಡುಗಡೆ ಹೊಂದಿದರು. ತನ್ನ ಜೀವನ ವಿಧಾನವನ್ನು ಹೊಸ ರೀತಿಯಲ್ಲಿ ರೂಪಿಸಿಕೊಳ್ಳಲು ಒಂಟಿಯಾಗಿ ನಿಂತಾಗ ಸರಕಾರ ಹಳೆಯ ದಾಖಲೆಗಳ ಮೇಲೆ ಶಿವರಾಯರನ್ನು ಬಂಧಿಸಿತು. ‘‘ಕಡೆಗೆ ಹಲವು ಲಾಕಪ್ಪುಗಳಲ್ಲಿ ಇರಿಸಿ, ನ್ಯಾಯಸ್ಥಾನದಲ್ಲಿ ವಿಚಾರಣೆಯನ್ನು ನಡೆಸಿ, ಕಡೆಗೆ ಬಹಳಷ್ಟು ದಿನ ಹಿಂಸೆಯನ್ನು ನೀಡಿ, ಕಡೆಗೆ ದಂಡವನ್ನು ವಸೂಲಿ ಮಾಡಿ ಶಿವರಾಯರನ್ನು ಬಂಧನದಿಂದ ಬಿಡುಗಡೆ ಮಾಡಿತು. ಜನಶಕ್ತಿಯಲ್ಲಿ ಸಂಗಾತಿ ಸಂಚಯದ ಮೂರು ಅಂಕಣ ಆಕ್ಷೇಪಾರ್ಹವೆಂದು 1947 ರಲ್ಲಿ ಮುರಾರ್ಜಿ ದೇಸಾಯಿ ಗೃಹಮಂತ್ರಿಯಾಗಿದ್ದಾಗ ಅದರ ವಿರುದ್ಧ ಶಿಕ್ಷೆ ಅನುಭವಿಸಲು ಮುಂಬಯಿಗೆ ಸರಕಾರ ಶಿವರಾಯನನ್ನು ಕರೆದು, ಅವುಗಳನ್ನು ವಿರೋಧಿಸಿತು. ಇಷ್ಟೆಲ್ಲ ವೈಫಲ್ಯವನ್ನುಂಡು ಹೊರಬಂದು

ಶಿವರಾಯ, ನಿರಂಜನರಾಗಿ, ಸಾಹಿತಿಯಾಗಿ, ಕನ್ನಡ ಸಾಹಿತ್ಯ ಸಾಗರದದಲ್ಲಿ ಚಿಕ್ಕ ಹೆಜ್ಜೆಗಳನ್ನು ಇಡುತ್ತಾ ದೊಡ್ಡ ಪರ್ವತವಾಗಿ ಬೆಳೆದು ನಿಂತರು. " ಇವರೊಂದಿಗೆ ಹೆಜ್ಜೆ ಜೋಡಿಸಿದವರು ವೆಂಕಟಲಕ್ಷ್ಮಿಯವರು ವೈದ್ಯರಾದ ಡಾ. ಅನುಪಮಾ ಅವರನ್ನು ಪ್ರೀತಿಸಿ 1956 ರಲ್ಲಿ ಮದವೆಯಾಗಿ ತುಂಬು ಜೀವನ ನಡೆಸಿದರು. ಸಾಹಿತ್ಯದಲ್ಲಿಯೂ, ಬದುಕಿನಲ್ಲಿಯೂ ಜತೆಯಾಗಿಯೇ ಸಾಗಿದರು.

ನಿಂಜನರು ವಿದ್ಯಾರ್ಥಿ ದೆಸೆಯಲ್ಲಿ ಕಿಶೋರ, ಕತೆಗಾರ, ಕು. ಶಿ. ರಾ. ಶೀರಾ, ಕುಳಕುಂದ ಮೊದಲಾದ ಹೆಸರಿನ ಹತ್ತಾರು ಕಥೆಗಳನ್ನು ಬರೆದಿದ್ದು, ಅವು ನಾಡಿನ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು, ಇವರು ಮೊದಲು ಕವಿತೆಗಳನ್ನು ಬರೆದರು. 'ಕರ್ನಾಟಕ ಕೊಡಗೂಸು' ಕವಿತೆಯನ್ನು ಕು. ಶಿ. ರಾ. ಎಂಬ ಹೆಸರಿನಲ್ಲಿ ಬರೆದಿದ್ದಾರೆ. ಅಲ್ಲದೆ ರಷ್ಯನ್ ಕವಿ ಕಾನ್‌ಸ್ಟಾಂಟಿನ್ ಸಿಮೊನೊವ ಯುದ್ಧರಂಗದಿಂದ ಯೋಧನೊಬ್ಬ ನಲ್ಲೆಗೆ ಬರೆದಂತೆ ಬರೆದಿರುವ ಕವಿತೆಯೊಂದನ್ನು ಕನ್ನಡಕ್ಕೆ 'ಕಾದಿರೆನಗಾಗಿ' ಎಂದು ಅನುವಾದಿಸಿದ್ದಾರೆ. ಆ ದಿನಗಳಲ್ಲಿಗೇ ಇವರು ಬರೆದ ' ಎಣ್ಣೆ ಚಿಮಣಿ ಎಣ್ಣೆ' ಎಂಬ ಕಥೆ ರಾಷ್ಟ್ರಬಂಧುವಿನಲ್ಲಿ ಪ್ರಕಟವಾಯಿತು. ಈ ಕಥೆಯನ್ನು ಪ್ರಕಟಿಸಿ ಪತ್ರಿಯ ಸಂಪಾದಕರಾಗಿದ್ದ ಕಡೆಂಗೊಡ್ಲು ಶಂಕರಭಟ್ಟರು ಬ್ರಿಟೀಷ್ ಸರ್ಕಾರದ ವಿಚಾರಣೆಗೊಳಗಾಗಿದ್ದರು. ಈ ಕಥೆಯ ಮಹತ್ವ ಎಷ್ಟೆಂದರೆ, ಭಾರತದಲ್ಲಿ ತುರ್ತು ಪರಿಸ್ಥಿಯಿದ್ದಾಗ ಅರುಣ ಪತ್ರಿಯ ಸಂಪಾದಕರು ಮರುಮುದ್ರಿಸಲು ಸರ್ಕಾರದ ಅನುಮತಿ ಕೋರಿದರೂ ಒಪ್ಪಿಗೆ ದೊರಕಲಿಲ್ಲ.

"ನಿರಂಜನರು ರಕ್ತದರೋವರ, ಅನ್ನಪೂರ್ಣ, ಕೊನೆಯ ಗಿರಾಕಿ, ವಾರದ ಹುಡುಗ, ಕಾತ್ಯಾಯಿನಿ, ಒಂಟಿ ನಕ್ಷತ್ರ ನಕ್ಕಿತು, ಮೊದಲಾದ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಈ ಎಲ್ಲಾ ಕಥೆಗಳನ್ನು ಐ. ಬಿ. ಎಚ್. ಪ್ರಕಾಶನ ಧ್ವನಿ 1, ಧ್ವನಿ 2, ಎಂಬ ಎರಡು ಸಂಪುಟಗಳಲ್ಲಿ ಪ್ರಕಟಿಸಿದೆ. ಕಥೆಗಳ ಆರಂಭದಲ್ಲಿ ಆಯಾ ಕಥೆಯ ಹುಟ್ಟು, ಸಂದರ್ಭ, ಬೆಳವಣಿಗೆಯನ್ನು ಕೂಡ ಲೇಖಕರು ನೀಡಿದ್ದಾರೆ. ಬಾಲ್ಯದಲ್ಲಿ ತನ್ನ ಸುತ್ತಮುತ್ತ ನಡೆದ ಘಟನೆಗಳನ್ನು ಅಂದರೆ, ತಂದೆಯಿಲ್ಲದ ಕೊರತೆಯಿಂದಾಗಿ ಬಾಲಕನೊಬ್ಬ ಅನುಭವಿಸುವ ವೇದನೆ, ಬಡ ವಿಧವೆ ತಾಯಿಯ ದೈನಂದಿನ ಬದುಕಿನ ಯಾತನೆ, ತೊಳಲಾಟಗಳನ್ನು ವಸ್ತುವಾಗಿಸಿಕೊಂಡು ಹಲವಾರು ಕಥೆಗಳನ್ನು ಬರೆದಿದ್ದಾರೆ., ಒಂದು ಹಿಡಿಹುಲ್ಲು, ಬಹಿಷ್ಕೃತೆ, ಮೂರುದುಡ್ಡು, ಮೊದಲಾದ ಕಥೆಗಳಲ್ಲಿ ಇಂಥ ಬದುಕಿನ ಚಿತ್ರವನ್ನು ಕಾಣಬಹುದು ರಕ್ತ ಸರೋವರ ಕಥೆಯಲ್ಲಿ ಕ್ಷಿಪ್ರ ಬದಲಾವಣೆ ತರಬಯಸುವ ಕ್ರಾಂತಿ ಮತ್ತು ದುರಂತಗಳ ಚಿತ್ರಣವಿದೆ, ಕೊನೆಯ ಗಿರಾಕಿ, ಕಥೆಯಲ್ಲಿ ಹೆಣ್ಣಿನ ಅಸಹಾಯಕತೆಯನ್ನು ದುರ್ಬಲ ಮನಸ್ಸಿನ ಪುರುಷರು ದುರುಪಯೋಗಪಡಿಸಿಕೊಳ್ಳುವ ಚಿತ್ರಣವಿದೆ. ಈ ಕಥೆಯಲ್ಲಿ ಬರುವ ಕಾಣಿಯಂತಹ ಹೆಣ್ಣುಗಳು ನಿರಂತರ ಶೋಷಣೆಗೊಳಗಾಗುತ್ತ ಸಾಮಾಜಿಕ ಸಮಸ್ಯೆಯ

ಪ್ರತಿನಿಧಿಗಳಾಗಿದ್ದಾರೆ. ಒಂಟಿ ನಕ್ಷತ್ರ ನಕ್ಕಿತು, ಕಥೆಯಲ್ಲಿ ಎರಡು ತಲೆಮಾರುಗಳ ನಡುವಿನ ಅಭಿಪ್ರಾಯ ಭೇದಗಳನ್ನು ಅಣೆಕಟ್ಟಿನ ವಿವಾದದಲ್ಲಿ ವ್ಯಕ್ತಗೊಳಿಸಿದ್ದಾರೆ. ಕಣ್ಣಾರೆ ಕಂಡವರು ಕಥೆಯಲ್ಲಿ ಬಲಪ್ರಯೋಗದಿಂದ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವ ನಿರ್ಲಜ್ಜ ರಾಜಕಾರಣಿಗಳ ಚಿತ್ರವವಿದು, ಸಮಕಾಲೀನ ವ್ಯವಸ್ಥೆಯ

ಮುಖಕ್ಕೆ ಕನ್ನಡಿ ಹಿಡಿದಂತಿದೆ. ಇವರ ಕಥೆಗಳು ಹಿಂದಿ, ತೆಲುಗು, ಮಲೆಯಾಳಂ, ಇಂಗ್ಲೀಷ್, ರಷ್ಯನ್ ಮತ್ತಿತ್ತರ ಭಾಷೆಗಳಿಗೆ ಅನುವಾದಿತವಾಗಿವೆ.

ನಿರಂಜನರು ಇಪ್ಪತ್ತೈದು ಕಾದಂಬರಿಗಳನ್ನು ಬರೆದಿದ್ದಾರೆ. ಮೊದಲನೆಯ ಕಾದಂಬರಿ, ವಿಮೋಚನೆ, ಕೊನಯ ಕಾದಂಬರಿ, ಮೃತ್ಯುಂಜಯ, ಬನಶಂಕರಿ, ರಂಗಮ್ಮನ ವಠಾರ, ದೂರದ ನಕ್ಷತ್ರ, ನವೋದಯ, ಚಿರಸ್ಮರಣೆ, ಕಲ್ಯಾಣಸ್ವಾಮಿ, ಸ್ವಾಮಿ ಅಪರಂಪರಾ, ಕೆಲವು ಪ್ರಮುಖ ಕಾದಂಬರಿಗಳು ಇವರ ಕಾದಂಬರಿಗಳನ್ನು ಐತಿಹಾಸಿಕ ವಸ್ತುವುಳ್ಳವು ಎಂದು ಸ್ಥೂಲವಾಗಿ ಮೂರು ಗುಂಪಾಗಿ ವಿಂಗಡಿಸಬಹುದು. ಚಿರಸ್ಮರಣೆ, ಮೃತ್ಯುಂಜಯ, ಕಲ್ಯಾಣಸ್ವಾಮಿ ಸ್ವಾಮಿ ಅಪರಾಂಪರಾ ಕಾದಂಬರಿಗಳಲ್ಲಿ ಐತಿಹಾಸಿಕ ಘಟನೆಗಳ ಕಥಾವಸ್ತು ಇದೆ ಆದೆ ಇಲ್ಲಿಯೂ ಹೋರಾಟದ ಚಿತ್ರಣ ಬರುತ್ತದೆ. ಚಿರಸ್ಮರಣೆ ಕಾದಂಬರಿಯ ಮೊದಲರ್ಧದಲ್ಲಿ, ಕಯ್ಯಾರು, ಎಂಬ ಹಳ್ಳಿಯ ಶಿಕ್ಷಕರೊಬ್ಬರು ತನ್ನ ಶಿಷ್ಯರಾದ ಅಪ್ಪು ಮತ್ತು ಚಿರುಕುಂಡರ ಮುಖಾಂತರ ಇಡೀ ಹಳ್ಳಿಯನ್ನು ಎಚ್ಚೆತ್ತುಕೊಳ್ಳುವಂತೆ ಮಾಡಿ ರೈತ ಚಳವಳಿ ನಡೆಸುವುದು ಕಂಡುಬಂದರೆ ಉತ್ತರಾರ್ಧದಲ್ಲಿ ಜಮೀನ್ದಾರರ ಒಳಸಂಚು ಬ್ರಿಟಿಷರ ದಬ್ಬಾಳಿಕೆ ರೈತರ ಮುಂದಾಳುಗಳಾದ ಅಪ್ಪು, ಚಿರಕುಂಡ, ಕುಞಂಬು, ಅಬೂಬಕರ್ ಅವರು ಗಲ್ಲು ಶಿಕ್ಷೆಗೊಳಗಾಗುವ ಚಿತ್ರಣವಿದೆ ಮೃತ್ಯುಂಜಯ ಕಾದಂಬರಿಯಲ್ಲಿ ನಾಲ್ಕುವರೆ ಸಾವಿರ ವರ್ಷಗಳ ಹಿಂದೆ ಈಜಿಪ್ಟ್ ದೇಶದಲ್ಲಿ ನಡೆದ ಗುಲಾಮರ ಮತ್ತು ಅವರನ್ನು ತಮ್ಮ ಬಲವಾದ ಹಿಡಿತದಲ್ಲಿರಿಸಿಕೊಂಡು ದೌರ್ಜನ್ಯ ದಬ್ಬಾಳಿಕೆಯಿಂದ ಆಳುವವರ ನಡುವೆ ನಡೆದ ಬಿಡುಗಡೆಯ ಹೋರಾಟದ ಚಿತ್ರಣವಿದೆ., ಕಲ್ಯಾಣಸ್ವಾಮಿ, ಕಾದಂಬರಿಯಲ್ಲಿ ಕೊಡಗಿನ ಅರಸು ಚಿಕ್ಕವೀರರಾಜೇಂದ್ರ ಅಧಿಕಾರ ಕಳೆದುಕೊಂಡ ಅನಂತರ ಆತನ ದಳಪತಿಯಾಗಿದ್ದ ಪುಟ್ಟಬಸವನೇ ಕಲ್ಯಾಣ ಸ್ವಾಮಿಯಾಗಿ ಬ್ರಿಟಿಷರ ಎದುರಾಗಿ ಜನತೆಯನ್ನು ಒಗ್ಗೂಡಿಸಿ ನಡೆಸಿದ ಹೋರಾಟದ ಕಥೆಯಿದೆ, ಸ್ವಾಮಿ ಅಪರಂಪರಾ, ಕಾದಂಬರಿಯಲ್ಲಿ ಚಿಕ್ಕವೀರರಾಜೇಂದ್ರನ ದೊಡ್ಡಪ್ಪನ ಮಗ ವೀರಪ್ಪಸ್ವಾಮಿ ಅಪರಂಪರಾನಾಗಿ ವೇಷ ಬದಲಿಸಿಕೊಂಡು ಕೊಡಗು ಸಂಸ್ಥಾನದ ಸ್ವಾತಂತ್ರ್ಯಕ್ಕಾಗಿ ನಡೆಸಿದ ಪ್ರಯತ್ನ ಕಂಡುಬರುತ್ತದೆ. ಹೋರಾಟ ಪ್ರಧಾನವಾದ, ವಿಮೋಚನೆ, ಕಾದಂಬರಿಯಲ್ಲಿ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಕಂಡುಬರುವ ಜನಸಾಮಾನ್ಯರ ಜೀವನ ಚಿತ್ರಗಳಲ್ಲಿ ಶೋಷಣೆ ಎಡಬಿಡದೆ ಮುಂದುವರೆದಿರುವುದನ್ನು ಕಾಣಬಹುದು ಸಾಮಾಜಿಕ ಕಾದಂಬರಿಯಾದ,

ಏಕಾಂಗಿನಿಯ, ಕಥಾನಾಯಕಿ ಸುನಂದ ತನ್ನ ಗಂಡ ಪುಟ್ಟಣ್ಣನಿಂದ ದೈಹಿಕ ಮತ್ತು ಮಾನಸಿಕ ಹಿಂಸೆಗೊಳಗಾಗುತ್ತಾಳೆ. ಆನಂತರದಲ್ಲಿ ಗಂಡನಿಂದ ವಿವಾಹವಿಚ್ಛೇದನ ಪಡೆದು ಛಲದಿಂದ ಏಕಾಂಗಿಯಾಗಿ ಬದುಕುವ ನಿರ್ಧಾರ ತೆಗೆದುಕೊಳ್ಳುತ್ತಾಳೆ., ರಂಗಮ್ಮನ ವಠಾರ, ಕಾದಂಬರಿ ನಗರ ಪ್ರದೇಶದಲ್ಲಿ ವಾಸಿಸುತ್ತಿರುವ ಮಧ್ಯಮ ವರ್ಗದವರ ಬದುಕಿನ ಒಳಹೊರಗನ್ನು ಮಾಡುತ್ತದೆ. ವಿಮೋಚನೆ (ರಷ್ಯನ್, ಸ್ಪಾರಿಯನಿಷ್, ಇಂಗ್ಲಿಷ್, ಮಲೆಯಾಳಂ, ತೆಲುಗು) ಅಭಯ (ತೆಲಗು) ಚಿರಸ್ಮರಣೆ (ಮಲೆಯಾಳಂ, ತೆಲುಗು, ತಮಿಳು, ಮರಾಠಿ, ಬಂಗಾಲಿ, ತುಳು, ಇಂಗ್ಲಿಷ್) ಸ್ವಾಮಿ ಅಪರಂಪರಾ (ಮಲಯಾಳಂ), ಮೃತ್ಯುಂಜಯ (ಮಲಯಾಳಂ, ತೆಲುಗು, ಹಿಂದಿ, ಅರಬ್ಬಿ ) ಕಾದಂಬರಿಗಳು ಇತರ ಭಾಷೆಗೆ ಭಾಷಾಂತರಗೊಂಡಿವೆ. ಇವರು ಗಾರ್ಕಿಯ ಮದರ್ ಕಾದಂಬರಿಯನ್ನು, ತಾಯಿ, ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಸಮತಾವಾದ ಜನತೆಯ ನಡುವೆ ಚೀಣಾ ದೇಶದ ನೀತಿ ಕಥೆಗಳು ಮಾನವನ ಪಾಡು ಸಂಗಮ್ ರಾಜಕೀಯ ವ್ಯವಸ್ಥೆ ಮೊದಲಾದವು ಇವರ ಅನುವಾದಿತ ಕೃತಿಗಳು ಸಂಗಮಸ್ನಾನ ಆಹ್ವಾನ ನಾವೂ ಮನುಷ್ಯರು ಮೊದಲಾದವು ಇವರ ಬರೆದ ನಾಟಕಗಳು. 1969ರಲ್ಲಿ ಕರ್ನಾಟಕ ಸಹಕಾರಿ ಪ್ರಕಾಶನ ಎಂಬ ಸಂಸ್ಥೆಯವರು ಮಕ್ಕಳಿಗಾಗಿ ಕಿರಿಯರ ವಿಶ್ವಕೋಶ ಜ್ಞಾಗಂಗೋತ್ರಿಯನ್ನು ತರಲು ಯೋಜಿಸಿದಾಗ ಅದರ ಜವಾಬ್ದಾರಿಯನ್ನು ವಹಿಸಿಕೊಂಡ ನಿರಂಜನರು ಏಳು ಸಂಪುಟಗಳನ್ನು ಸಿದ್ಧಪಡಿಸಿಕೊಟ್ಟರು. 1979–82ರ ಅವಧಿಯಲ್ಲಿ ನವಕರ್ನಾಟಕ ಪ್ರಕಾಶನ ಸಂಸ್ಥೆಗಾಗಿ ಪ್ರಪಂಚದ

ಹಲವಾರು ದೇಶ ಭಾಷೆಯ ಕಥೆಗಳನ್ನು ಕನ್ನಡಕ್ಕೆ ತಂದುಕೊಡುವ ಹೊಣೆಗಾರಿಕೆಯನ್ನು ಹೊತ್ತು ವಿಶ್ವಕಥಾಕೋಶ ಮಾಲಿಕೆಯಲ್ಲಿ ಇಪ್ಪತ್ತೈದು ಸಂಪುಟಗಳನ್ನು ಸಂಪಾದಿಸಿಕೊಟ್ಟರು. ಭಾರತದ ಇನ್ನಾವುದೇ ಭಾಷೆಯಲ್ಲೂ ಇಂಥ ಯೋಜನೆ ನಡೆದಿಲ್ಲ. ಈ ಎರಡೂ ಯೋಜನೆಯ ಕೆಲಸಗಳು ನಿರಂಜನ ವಿದ್ವತ್ತಿಗೆ ಸಾಕ್ಷಿಯಾಗಿವೆ.

ಹೋರಾಟವನ್ನು ಬದುಕಿನ ಮೌಲ್ಯವಾಗಿಸಿಕೊಂಡು ತಮ್ಮ ಬರವಣಿಗೆಯಲ್ಲಿ ಅದನ್ನು ಬದ್ದತೆಯಿಂದ ಪ್ರಕಟಿಸಿದವರು ಕುಳಕುಂದ ಶಿವರಾಯ ಅರ್ಥಾತ್ ನಿರಂಜನರು. ಹೈಸ್ಕೂಲ್ ಹಂತದಲ್ಲಿಯೇ ಎಡಪಂಥೀಯ ಮಾರ್ಕ್ಸ್ ವಿಚಾರಗಳು ಪ್ರಭಾವಕ್ಕೆ ಒಳಗಾಗಿ ರಾಜಕೀಯ ಚಟುವಟಿಕೆಗಳಿಗೆ ತೊಡಗಿಸಿದರು ಆಳುತ್ತಿದ್ದ ಬ್ರಿಟಿಷ್ ಸರ್ಕಾರಕ್ಕೆ ಕಮ್ಯೂನಿಷ್ಟ್ ಕ್ರಾಂತಿಕಾರಿ ಆಗ ಸಿಂಹ ಸ್ವಪ್ನ ಎಂಬ ಮಾತನ್ನು ನಿರಂಜನರೇ ಹೇಳಿದ್ದಾರೆ. ಭಾರತ ವ್ಯವಸ್ಥೆಯನ್ನು ತಮ್ಮ ಹಿಡಿತದಲ್ಲಿ ಹಿಡಿದಿದ್ದ ಬ್ರಿಟಿಷರನ್ನು ಅಲುಗಾಡಿಸಲು ಕ್ರಾಂತಿಕಾರಿ ಮಾರ್ಕ್ಸ್‌ವಾದಿಯೇ ಮಾರ್ಗೋಪಾಯ ಎಂದು ಆಲೋಚಿಸಿದ್ದರು ಅಂಥ ಕ್ರಾಂತಿಯ ಮೂಸೆಯಲ್ಲಿಯೇ ಮೂಡಿ ಬಂದು

ಅವರ ಕೃತಿಗಳಲ್ಲಿ ಒಂದಲ್ಲ ಒಂದು ತಾತ್ವಿಕತೆ ಇದ್ದೇ ಇರುತ್ತದೆ. ರೈತ ಹೋರಾಟದ ಚಿರಸ್ಮರಣೆ ಕನ್ನಡ ಸಾಹಿತ್ಯದಲ್ಲಿ ಒಂದು ಮೈಲಿಗಲ್ಲು ಮೃತ್ಯಂಜಯ ಮತ್ತೊಂದು ವಿಶಿಷ್ಟ ಕಾದಂಬರಿ ರಾಷ್ಟ್ರಬಂಧು ತಾಯಿನಾಡು ಜನವಾಣಿ ಸಂಯುಕ್ತ ಕರ್ನಾಟಕ ಪ್ರಜಾವಾಣಿಯಲ್ಲಿ ಅಂಕಣಕಾರರಾಗಿದ್ದ ಇವರ ಅಂಕಣಗಳು ಅಂಕಣ ದಿನಚರಿ ಹೆಸರುಗಳಿಂದ ಪ್ರಕಟವಾಗಿವೆ. 9 ಕಥಾಸಂಕಲಗಳು, 25 ಕಾದಂಬರಿಗಳು, 3 ನಾಟಕಗಳು, ಹಲವು ಸಂಪಾದನೆ ಹಾಗೂ 300ಕ್ಕೂ ಹೆಚ್ಚು ಪುಟದಷ್ಟು ಅಪ್ರಕಟಿತ ಬಿಡಿ ಬರಹಗಳನ್ನು ಒಳಗೊಂಡಂತೆ 88ಕ್ಕೂ ಕೃತಿಗಳು ಪ್ರಕಟವಾಗಿವೆ. ಕಲ್ಯಾಣಸ್ವಾಮಿ ಸ್ವಾಮಿ ಅಪರಾಂಪರ, ವಿಮೋಚನೆ, ರಂಗಮ್ಮನ ವಠಾರ, ಅಭಯ, ನಂದುಗೋಕುಲ, ಬನಶಂಕರಿ, ಮುಂತಾದವು ಇವರ ಇನ್ನುಳಿದ ಕಾದಂಬರಿಗಳು. ಈ ಕೃತಿಗಳು ಮೂಲಕ ಪ್ರಗತಿಶೀಲ ಪಂಥವನ್ನು ತಾತ್ವೀಕರಿಸಿದರು. ಬದುಕು ಮತ್ತು ಕೃತಿ ಎರಡರಲ್ಲಿಯೂ ಬದ್ಧತೆಯನ್ನು ಕಂಡುಕೊಂಡಿದ್ದರು.

**ಉಪಸಂಹಾರ:**

ನಿರಂಜನರು ತಮ್ಮ ಬರಹಗಳ ತಾತ್ವಿಕ ನೆಲೆಯನ್ನು ಕಂಡುಕೊಂಡು ಸಾಬೀತು ಪಡಿಸಿದವರು. ಅವರ ನಂಬಿದ ಮಾರ್ಕ್ಸ್‌ವಾದದ ಸಿದ್ಧಾಂತಗಳನ್ನು ಬದುಕಿನುದ್ದಕ್ಕೂ ಬದ್ಧತೆಯಿಂದ ಕಾಪಾಡಿಕೊಂಡು ಬಂದವರು. ಏಕಕಾಲದಲ್ಲಿ ಭಾರತ ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ವಿರುದ್ಧ ಹೋರಾಟ ಭಾರತೀಯ ಊಳಿಗಮಾನ್ಯ ವ್ಯವಸ್ಥೆ ಬಂಡವಾಳಶಾಹಿ ವ್ಯವಸ್ಥೆಯ ದಬ್ಬಾಳಿಕೆಗಳ ವಿರುದ್ಧ ಹೋರಾಟವನ್ನು ಕಟ್ಟಿಕೊಂಡರು ಸಿದ್ಧಾಂತವನ್ನು ಕತೆಯಾಗಿಸುವ ಕಲೆಗಾರಿಕೆ ಅವರಿಗೆ ಸಹಜವಾಗಿಯೇ ಒಲಿದು ಬಂದಿದೆ. ಅವ ಎಲ್ಲ ಕತೆಗಳ ಹಿಂದೆ ಸೈದ್ಧಾಂತಿಕತೆ ಪ್ರಗತಿಪರತೆ ವೈಚಾರಿಕೆ ಧೋರಣೆಗಳು ಮಾನವೀಯ ಅಂತಕಣದಿಂದಲೇ ಸ್ಫುರಣಗೊಳ್ಳುತ್ತವೆ. ಹೀಗಾಗಿ ಅವ ಕತೆಗಳಲ್ಲಿ ಬದಲಾವಣೆ ಬಗೆಗೆ ವ್ಯಾಕುಲತೆ ಅಸಮಾನತೆಯ ವಿರುದ್ಧ ಆಕ್ರೋಶ ದಲಿತರ ಬಗೆಗಿನ ಕಾಳಜಿ ಎದ್ದು ಕಾಣುತ್ತದೆ. ತುಂಬಾ ಗಂಭೀರವಾದ ವಸ್ತುವನ್ನು ಆರಿಸಿಕೊಂಡು ಅದನ್ನು ವರ್ಣಿಸುವ ಕ್ರಮ ವಿಶಿಷ್ಟವಾದುದು. ಅವರ ಚಿರಸ್ಮರಣೆ ಕಾದಂಬರಿಯ ಮೂಲಕ ಇಂಥ ನಿಲುವುಗಳನ್ನು ರೈತ ಹೋರಾಟದ ಸಾಧ್ಯತೆಗಳನ್ನು ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡಿದವರು ಅಲ್ಲಿ ನಾಲ್ಕು ಹುಡುಗರು ಮತ್ತು ಮಾಸ್ತರ ಮೂಲಕ ಕಯ್ಯೂರಿನಲ್ಲಿ ನಡೆದ ಕ್ರಾಂತಿಯನ್ನು ಕಥನವಾಗಿ ಕಟ್ಟಿಕೊಟ್ಟ ನಿರಂಜನರು ದೇಗುಲದಲ್ಲಿ ಪಾದರಕ್ಷೆ ಎಂಬ ಕತೆಯ ಮೂಲಕ ಅಸ್ಪರಿುಶ್ಯತೆಯ ವಿವಿಧ ಆಯಾಮಗಳನ್ನು ಚಿತ್ರಿಸುತ್ತಾರೆ.

ಸಾಮ್ರಾಜ್ಯಶಾಹಿ ವಿರುದ್ಧ ಹೋರಾಟ ರಾಷ್ಟ್ರೀಯ ಚಳುವಳಿಯ ಹೋರಾಟ ಅಸ್ಪೃಶ್ಯರ ಸಮಾಜಿಕ ಸಮಾನತೆಗಾಗಿ ಹೋರಾಟ ಹಾಗೂ ಗಾಂಧೀಜಿಯವರು ತತ್ವ

ಚಿಂತನೆಗಳಿಗೆ ಪ್ರಭಾವಿತರಾಗಿ ನಿರಂಜನರು ತಮ್ಮ ಕತೆಗಳಲ್ಲಿ ಅಭಿವ್ಯಕ್ತಿಸಿರುವುದು ಕಾಣಬಹುದು. ನಿರಂಜನರು ಸಾಹಿತ್ಯಿಕವಾಗಿ ಕುವೆಂಪು ಅವರಿಂದ ಪ್ರಭಾವಕ್ಕೊಳಗಾಗಿ ಅಸ್ಪೃಶ್ಯರ ಜೀವನದ ಚಿತ್ರಣಗಳನ್ನು ಪ್ರತಿಭಟನಾತ್ಮಕ ಸ್ವರೂಪದಲ್ಲಿ ಅಭಿವ್ಯಕ್ತಿಯ ಮಾದರಿಗಳನ್ನು ನಿರೂಪಿಸಿದ್ದಾರೆ. ಹಾಗೆಯೇ ನಿರಂಜನರು ವರ್ಗಪ್ರಜ್ಞೆ ಜಾತಿಸಮಸ್ಯೆ ಬಡ ಕುಟುಂಬದ ಸಂವೇದನೆ ಮಾನವೀಯತೆ ಆದರ್ಶವಾದ ಅನುಕಂಪ ಇವುಗಳನ್ನೆಲ್ಲ ತಮ್ಮ ಕತೆಗಳಲ್ಲಿ ನೆಲೆಗೊಳಿಸಿರುವುದು ಕಾಣಬಹುದಾಗಿದೆ. ಅಲ್ಲದೆ ನಿರಂಜನರ ಕತೆಗಳಲ್ಲಿ ಸೃಜನಶೀಲತೆ ಮತ್ತು ಪ್ರಗತಿಶೀಲತೆಯನ್ನು ಕಾಣಬಹುದು. ಸಮಾಜದ ನಿಲುವುಗಳನ್ನು ಸಾಹಿತ್ಯದ ಮುಖ್ಯ ಗುರಿಯನ್ನಾಗಿ ಮಾಡಿಕೊಂಡ ಪ್ರಗತಿಶೀಲ ಬರಹಗಾರರಲ್ಲಿ ನಿರಂಜನರು ಅಗ್ರಗಣ್ಯರು ಬಡವರಪರ ಬಂಡಾಯ ಮನೋಧರ್ಮ ಅಭಿವ್ಯಕ್ತಿಸಲು ತಮ್ಮ ಬರವಣಿಗೆಯನ್ನು ಅಸ್ತ್ರವಾಗಿ ಬಳಸಿಕೊಂಡವರು. ಸಾಹಿತ್ಯ ಮಡಿವಂತಿಕೆಗಿಂತ ಬಡವರನ್ನು ಕಾಡುವ ಬದಿಕಿನ ಬೆಂಕಿಯ ಬಾಣಲೆಯೇ ದೊಡ್ಡದು. ಅದು ಅವರ ಸಮಾಜವಾದವನ್ನು ಸಾಹಿತ್ಯದೊಂದಿಗೆ ಬೆರೆಸಿರುವ ಸ್ವಷ್ಟ ನಿಲುವು ನಿರಂಜನರ ಪ್ರಮಾಣಿಕತೆಯನ್ನು ಯಾರು ಪ್ರಶ್ನೆ ಮಾಡುವಂತಹದ್ದಲ್ಲ ಜೊತೆಗೆ ಸಮಕಾಲಿನ ವಿಧ್ಯಾಮಾನಗಳು ಅವರನ್ನು ಆಕರ್ಷಿಸಿದವು. ನಿರಂಜನರು ತಾವು ಬದುಕಿದ್ದ ಕಾಲಕ್ಕೆ ತಮ್ಮ ರಾಜ್ಯದ ಆಗೂಹೋಗುಗಳಿಗೆ ತೀವ್ರವಾಗಿ ಸ್ಪಂದಿಸಿದವರು. ಸ್ಪಂದನವನ್ನು ಬರವಣಿಗೆಯ ಮೂಲಕ ಅವರು ಬದುಕಿದ್ದ ಕಾಲಮಾನ (1924–1992) ದಲ್ಲಿ ಕರ್ನಾಟಕದಲ್ಲಿ ಆಗಿ ಹೊದಪ್ರತಿಯೊಂದು ಘಟನೆಯೂ ಅದು ಸಾಹಿತ್ಯಕವಾಗಿರಲಿ, ಸಾಮಾಜಿಕವಾಗಿರಲಿ, ರಾಜಕೀಯವಾಗಿರಲಿ ಅದು ಬದುಕಿನಲ್ಲಿ ಪ್ರವೇಶ ಮಾಡಿ ಕೃತಿಗಳಲ್ಲಿ ಹೊರ ಹೊಮ್ಮಿದೆ.

**ಪರಾಮರ್ಶನ ಗ್ರಂಥಗಳು:**


1. ಅನುಪಮನಿರಂಜನ, (2008), ಸಾಹಿತ್ಯ ಮತ್ತು ಪ್ರಗತಿ, ಡಿ.ವಿ.ಕೆ. ಮುರ್ತಿ ಪ್ರಕಾಶಕರು, ಮೈಸೂರು.
2. ಉಮಾ ಆರ್. (2005), ನಿರಂಜರ ಕಾದಂಬರಿಗಳಲ್ಲಿ ಸಾಮಾಜಿಕ ನಿಲುವು, ಕನಕ ಸಾಹಿತ್ಯ ಪ್ರತಿಷ್ಠಾನ, ಬೆಂಗಳೂರು.
3. ಕೃಷ್ಣರಾಯ ಅ.ನ. (1944), ಪ್ರಗತಿ ಶೀಲ, ಕರ್ನಾಟಕ ಸಾಹಿತ್ಯ ಮಂದಿರ, ಬೆಂಗಳೂರು.
4. ನಟರಾಜ್ ಹುಳಿಯಾರ್, (2003), ಮಾರ್ಕ್ಸ್, ಗಾಂದಿ, ಸಮಾಜವಾದ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
5. ನಿರಂಜನ, (2007), ಬುದ್ದಿಭಾವ ಬದುಕು, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.